

# ಕಗ್ಗತ್ತಲ ನಡುವಿನ ‘ಚಂದ್ರ’ ಈಕೆ...

ನಾನು ಹೇಳಬಯಸುವುದು, ನಮ್ಮ ಅಕ್ಕಪಕ್ಕದ ಮೂರ್ನಾಲ್ಕು ಮನೆಗಳಲ್ಲಿ ಮನೆಗೆಲಸ ಮಾಡುತ್ತಿರುವ ಸುಮಾರು 45 ವರ್ಷದ ಬಡ ಅನಕ್ಷರಸ್ಥ, ಆದಿವಾಸಿ ಹೆಣ್ಣುಮಗಳು ‘ಚಂದ್ರಾ’ಳ ಬಗ್ಗೆ.

ಚಂದ್ರಾಳ ಬದುಕು ಸಂಘರ್ಷದ ಹಾದಿಯೇ. ಸುಮಾರು 10 ವರ್ಷದವಳಿರುವಾಗಲೇ ತಾಯಿಯನ್ನು ಕಳೆದುಕೊಂಡು ಅನಾಥಳಾದಳು. ತಂದೆ ಮತ್ತು ಮಲತಾಯಿಯ ಕಾಟ ತಾಳಲಾರದೆ ಮನೆಯಿಂದ ಹೊರಬಿದ್ದಳು. ಗೊತ್ತು ಗುರಿಯಿಲ್ಲದೇ ಅಲೆಯುತ್ತಿರುವಾಗ, ಒಬ್ಬ ಅಪರಿಚಿತ ವ್ಯಕ್ತಿಯು ಈಕೆಯನ್ನು ನಂಬಿಸಿ ಕರೆದುಕೊಂಡು ಹೋಗಿ ವೇಶ್ಯಾವಾಟಿಕೆಗೆ ಮಾರಿ ಬಂದ. ಆಗ ಚಂದ್ರಾಳ ವಯಸ್ಸು ಅಂದಾಜು 13 ವರ್ಷವಿರಬಹುದು.

ವೇಶ್ಯಾವಾಟಿಕೆಗೆ ಸೇರಿದ ಹೊಸತರಲ್ಲಿ ಅಲ್ಲಿ ಏನು ವ್ಯವಹಾರ ನಡೆಯುತ್ತಿದೆ ಎಂಬುದರ ಅರಿವಿರಲಿಲ್ಲ. ಅಪ್ರಾಪ್ತ ವಯಸ್ಸು ಅವಳದು. ಒಂದು ವರ್ಷ ಕಳೆಯುತ್ತಿದ್ದಂತೆ ಅವಳಿಗೆ ನಿಧಾನವಾಗಿ ಎಲ್ಲ ತಿಳಿಯುತ್ತ ಹೋಯಿತು. ಅಲ್ಲಿಂದ ಶುರುವಾಯಿತು, ಚಂದ್ರಾಳ ಬದುಕಿನ ಮತ್ತೊಂದು ಕರಾಳ ಅಧ್ಯಾಯ. ಪ್ರತಿದಿನವೂ ಅರೆ ಹೊಟ್ಟೆ. ರಾತ್ರಿಯಾದೊಡನೆ ವಿಟರ ಕಾಟ. ಇದೆಲ್ಲರಿಂದ ಬಸವಳಿದು ಹೋದಳು ಚಂದ್ರಾ.

ನರಕ ಸದೃಶ ದಿನಗಳು ಸಾಗುತ್ತಿರುವಾಗ, ಅಲ್ಲಿ ಬರುವ ವಿಟರ ಪೈಕಿ ಒಬ್ಬ ಬಿಹಾರಿ ಯುವಕ ಅವಳನ್ನು ಅಲ್ಲಿಂದ ಬಿಡಿಸಿ ಆಗ್ರಾಕ್ಕೆ ಕರೆದುಕೊಂಡು ಹೋಗಿ ಮದುವೆಯೂ ಆದ.

ಹೊಸದರಲ್ಲಿ ಎಲ್ಲವೂ ಚೆನ್ನಾಗೇ ಇತ್ತು. ಅವನಿಂದ 5 ಮಕ್ಕಳಾದವು, ಚಂದ್ರಾಳಿಗೆ. ಆದರೆ ದಿನ ಕಳೆದಂತೆ ಅವನೂ ಅವಳಿಗೆ ಕಾಟ ಕೊಡಲು ಶುರುಮಾಡಿದ. ಇತ್ತ ಗಂಡನ ಹೊಡೆತ, ಅತ್ತ ಅತ್ತೆಮಾವಂದಿರ ಕಿರುಕುಳ ಸಹಿಸಲಸಾಧ್ಯವಾಗಿ ಮತ್ತೆ ಮನೆ ತೊರೆದಳು. ನಾಲ್ಕು ಮಕ್ಕಳನ್ನು ಮಡಿಲಲ್ಲಿ ಇಟ್ಟುಕೊಂಡು ಟ್ರೇನು ಹತ್ತಿ ಆಗ್ರಾದಿಂದ ಹೊರಟು ಅಲ್ಲೀ ಇಲ್ಲೀ ಅಲೆದ ಚಂದ್ರಾ, ಕೊನೆಗೆ ಒಡಿಶಾ ರಾಜ್ಯದ ರಾಯಗಡ ಜಿಲ್ಲೆಯ ಚಾಂದಿಲೀ ಗ್ರಾಮಕ್ಕೆ ಬಂದಳು. ಹಾಗೂ ಹೀಗೂ ಒಡಿಯಾ ಸರ್ಕಾರದಿಂದ ಬಡವರಿಗಾಗಿಯೇ ನಿರ್ಮಿಸಿದ್ದ ಗುಡಿಸಲಂಥ ಮನೆಯಲ್ಲಿ ವಾಸವಾದಳು.

ನಂತರ ಬದುಕಿನೊಂದಿಗೆ ಹೋರಾಡಿ ತನ್ನ ನಾಲ್ಕೂ ಮಕ್ಕಳಿಗೆ ತಕ್ಕಮಟ್ಟಿಗೆ ವಿದ್ಯಾಭ್ಯಾಸ ಕೊಡಿಸಿದ್ದಾಳೆ. ಇಷ್ಟಾದರೂ ಚಂದ್ರಾ ಸುಮ್ಮನೆ ಕುಳಿತಿಲ್ಲ. ನಮ್ಮ ಅಕ್ಕಪಕ್ಕದ ಉದ್ಯೋಗಸ್ಥ ಮಹಿಳೆಯರ ಮನೆ ಕೆಲಸ ಮಾಡಿ, ಜೊತೆಗೆ ಹೊಲಗಳಲ್ಲಿ ಹತ್ತಿ ಬೆಳೆ ಕೀಳಲು ಹೋಗುವಳು. ಅವಕಾಶ ಸಿಕ್ಕಲ್ಲಿ ಗಾರೆ ಕೆಲಸವನ್ನೂ ಮಾಡುವಳು.

ಜೀವನದಲ್ಲಿ ಅಪರಿಮಿತ ಕಷ್ಟಗಳು ಬಂದರೂ ಎದೆಗುಂದದೇ ಧೈರ್ಯದಿಂದ ಎದುರಿಸಿ ಬದುಕು ಕಟ್ಟಿಕೊಂಡ ದಿಟ್ಟ ನಾರಿ ಚಂದ್ರಾ. ಹಲವಾರು ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಯಶಸ್ವಿಯಾದ ಮಹಿಳೆಯರ ಮಧ್ಯೆ ಇವಳೂ ಅಕ್ಷರಶಃ ಚಂದ್ರಾಳೇ.

—ವೈಶಾಲಿ ಉಪಾಧ್ಯಾಯ, ಒಡಿಶಾ

# ಗೆಳತಿಯರ ಸಾಧನೆ ಸ್ಫೂರ್ತಿಯಾಗಲಿ

ಆರೋಗ್ಯವಂತ ಸಮಾಜ ನಿರ್ಮಾಣವಾಗಬೇಕೆಂದರೆ ನಿಸ್ವಾರ್ಥದ ದುಡಿಮೆ ಬೇಕು. ಆ ನಿಸ್ವಾರ್ಥದ ದುಡಿಮೆಗೆ ಹಲವಾರು ಅಡೆತಡೆಗಳು ಉಂಟು. ಅದನ್ನೆಲ್ಲಾ ದಾಟಬೇಕೆಂದರೆ ಅದೆಷ್ಟು ಮಾನಸಿಕ ಹಿಂಸೆಗಳನ್ನು ಅನುಭವಿಸಬೇಕು ಎಂಬುದು ಯಶಸ್ಸು ಬಂದಾಗಲೇ ತಿಳಿಯುವುದು. ಅದಕ್ಕೊಂದು ಸಣ್ಣ ಉದಾಹರಣೆ, ‘ನಮ್ಮ ಶಾಲೆ’. ನನ್ನ ಗೆಳತಿಯರು ಇದಕ್ಕಾಗಿ ಪಟ್ಟ ಸಾಹಸ ಹೇಳತೀರದು.

ಕೊಳಗೇರಿಯ ಮನೆ ಮನೆಗೆ ಹೋಗಿ ಆ ಅವಿದ್ಯಾವಂತ ಪೋಷಕರನ್ನು ಭೇಟಿಯಾಗಿ ಅವರಿಗೆ ವಿದ್ಯಾಭ್ಯಾಸದ ಅರಿವನ್ನು ತಿಳಿಸಿ, ಆ ಮಕ್ಕಳನ್ನು ತಾವುಗಳೇ ಗಾಡಿಯಲ್ಲಿ ಕರೆತಂದು ಶಾಲೆ ಪ್ರಾರಂಭಿಸಿ, ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ.

ಇದರ ಸಂಘರ್ಷ, ಮೊದಲನೆಯದಾಗಿ ಜಾಗ. ಅದಕ್ಕಾಗಿ ಪಟ್ಟ ಶ್ರಮ, ಕೊಳಗೇರಿಗಳ ಪಾನಮತ್ತ ಪೋಷಕರ ನಿಂದನೆ, ತಮ್ಮ ತಮ್ಮ ಮನೆಯವರ ವಿರೋಧ, ಇವನ್ನೆಲ್ಲಾ ಮೆಟ್ಟಿ ನಿಂತು ಈ ಶಾಲೆಯನ್ನು ನನ್ನ ಗೆಳತಿಯರು ಎಲೆಮರೆಯ ಕಾಯಿಯಂತೆ ನಡೆಸುತ್ತಿದ್ದಾರೆ. ಇದಕ್ಕೆ ಹಲವು ಸಂಘ ಸಂಸ್ಥೆಗಳು ಕೈ ಜೋಡಿಸುತ್ತಿದ್ದಾರೆ. ಈ ಶಾಲೆ ಪ್ರಾರಂಭವಾಗಿ ಸುಮಾರು 10, 15 ವರುಷವಾಯಿತು.

ಇಲ್ಲಿಂದ ಕಲಿತ ಮಕ್ಕಳು ಉದ್ಯೋಗ ಮಾಡುತ್ತಾ, ತಮ್ಮ ಪೋಷಕರಿಗೆ ಸಹಾಯಹಸ್ತ ನೀಡುತ್ತಿದ್ದಾರೆ. ನನ್ನ ಗೆಳತಿಯರ ಈ ಸಾಧನೆ ಸಮಾಜದಲ್ಲಿ ಎಲ್ಲರಿಗೂ ಸ್ಫೂರ್ತಿ.

—ಗಾಯತ್ರಿ ಸ್ವಾಮಿ

## ಮೂರ್ಖರಾದ ಆ ದಿನ!



ಮೂರ್ಖರಾಗುವ ಪ್ರಸಂಗ ಎಲ್ಲರ ಜೀವನದಲ್ಲಿ ಒಮ್ಮೆಯಾದರೂ ನಡೆದೇ ಇರುತ್ತದೆ. ಏನೇ ಜಾಣತನದಿಂದಿದ್ದರೂ ನಾವೆಷ್ಟೇ ಚಾಲಾಕಿ ಎಂದುಕೊಂಡಿದ್ದರೂ ಗೊತ್ತೋ ಗೊತ್ತಿಲ್ಲದೆಯೋ ಬೇಸ್ತು ಬೀಳುವ ಸಂಗತಿಯಂತೂ ಸಂಭವಿಸಿಯೇ ಇರುತ್ತದೆ. ಅದು ಆ ಕ್ಷಣಕ್ಕೆ ಮುಜುಗರ, ಬೇಸರ, ಕೋಪ ತರಿಸಿದ್ದರೂ ಕಾಲ ಕಳೆದಂತೆ ಒಂದು ನೆನಪಾಗಿ, ಮನದಲ್ಲಿ ನಗು ಮೂಡಿಸುತ್ತದೆ. ಅಂಥ ಸ್ವಾರಸ್ಯಕರ ಪ್ರಸಂಗ ನಿಮ್ಮ ಜೀವನದಲ್ಲಿಯೂ ನಡೆದಿದೆಯೇ? ನೀವು ಮೂರ್ಖರಾದ ಆ ಸಂಗತಿ ಯಾವುದು? ನಿಮ್ಮ ಅನುಭವವನ್ನು ‘ಸುಧಾ’ದೊಂದಿಗೆ ಹಂಚಿಕೊಳ್ಳಬಹುದು. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಏಪ್ರಿಲ್ 30. ಬರಹ ಕಳುಹಿಸಬೇಕಾದ ವಿಳಾಸ: editorsu@sudha.co.in